ಬಂದವು. ದೇಶದ ಜನರಿಗೆ ಈ ಪರಿಕಲ್ಪನೆಗಳ ಮಹತ್ವ ಅರ್ಥವಾಯಿತು.

ಲೋಹಿಯಾ ಲೋಕಸಭೆ ಪ್ರವೇಶಿಸುವ ತನಕ ಪಾರ್ಲಿಮೆಂಟ್ ಪ್ರಧಾನಮಂತ್ರಿಗಳ ಕೈಗೊಂಬೆಯಾಗಿತ್ತು. ವಿರೋಧ ಪಕ್ಷ ಮಲುದನಿಯಲ್ಲಿತ್ತು. ಲೋಹಿಯಾ ವಿರೋಧ ಪಕ್ಷ ಎಂದರೇನೆಂಬುದನ್ನು ದೇಶಕ್ಕೆ ತೋರಿಸಿಕೊಟ್ಟರು. ಆಡಳಿತ ಪಕ್ಷದ ಸದಸ್ಯರಿಗಂತೂ ಸರ್ಕಾರದ ಪರವಾಗಿ ಕೈಎತ್ತುವುದಷ್ಟೇ ಕೆಲಸವಾಗಿತ್ತು. ಈ ಬಗೆಯ ವಿಧೇಯತೆ ಅಪಾಯಕಾರಿ ಎಂಬುದನ್ನು ಲೋಹಿಯಾ ತೋರಿಸಿಕೊಟ್ಟರು.

ಲೋಕಸಭೆಯಲ್ಲಿ ಲೋಹಿಯಾ '1450 ವಿಷಯಗಳ ಬಗ್ಗೆ ಮಾತಾಡಿದ್ದಾರೆ' ಎಂದು ಪಟ್ಟಿ ಮಾಡಿದ ಜಿ. ಸ್ವಾಮಿನಾಥನ್ ಬರೆದರು: 'ಇದು ಲೋಹಿಯಾ ಆಗಸ್ಟ್ 1963ರಿಂದ ಸೆಪ್ಟೆಂಬರ್ 1967ರವರೆಗಿನ ಬಹುತೇಕ ಲೋಕಸಭಾ ಅಧಿವೇಶನಗಳಲ್ಲಿ ಭಾಗವಹಿಸಿ ಮಂಡಿಸಿದ ವಿಚಾರಗಳ ವಿಷಯಪಟ್ಟಿಯನ್ನಾಧರಿಸಿದ ಅಂದಾಜು. ಅವರು ಇದಕ್ಕಿಂತ ಹೆಚ್ಚಿನ ಸಂಖ್ಯೆಯ ವಿಷಯಗಳ ಬಗ್ಗೆ ಮಾತಾಡಿರುವ ಸಾಧ್ಯತೆ ಇದೆ.'

ಇತ್ತ ವಿರೋಧ ಪಕ್ಷಗಳ ಸಂಯುಕ್ತ ವಿಧಾಯಕ ದಳ ಸರ್ಕಾರಗಳಿಗೆ ಚಾಟಿ ಬೀಸುವ ಕೆಲಸವನ್ನೂ ಲೋಹಿಯಾ ಮಾಡುತ್ತಿದ್ದರು:

'ಆರು ತಿಂಗಳಲ್ಲಿ ಪೊಲೀಸ್ ಹಾಗೂ ಆಡಳಿತ ಯಂತ್ರದ ಸುಧಾರಣೆ, ಕೃಷಿ ತೆರಿಗೆಯ ರದ್ದತಿ, ಮೇಲ್ವರ್ಗದ ಶಾಲೆಗಳನ್ನು ಮುಚ್ಚುವುದು, ಆಡಳಿತ ವೆಚ್ಚದ ನಿಯಂತ್ರಣ ಮುಂತಾದ ಕೆಲವು ಯೋಜನೆಗಳನ್ನಾದರೂ ಜಾರಿಗೊಳಿಸಬೇಕು. ಕೊನೆಯ ಪಕ್ಷ ಇವುಗಳಲ್ಲಿ ಒಂದನ್ನಾದರೂ ಮಾಡದಿದ್ದರೆ ಈ ಸರ್ಕಾರಗಳ ವಿರುದ್ಧವೂ ಚಳುವಳಿ ಹೂಡಬೇಕೆಂದು ಜನರನ್ನು ಕೇಳಿಕೊಳ್ಳುತ್ತೇನೆ.'

* * *

ಈ ದಿನಗಳಲ್ಲೊಮ್ಮೆ ಲೋಹಿಯಾ ತನಗೆ ಬರೆದ ಪತ್ರಗಳ ಮಹತ್ವ ಕುರಿತ ಪ್ರಸ್ತಾಪ ಅಕಸ್ಮಾತ್ತಾಗಿ ಬಂದಿದ್ದನ್ನು ರಮಾ ನೆನೆಯುತ್ತಾರೆ:

'...ಅವರು ಹಾಸಿಗೆಯಲ್ಲಿ ಒರಗಿಕೊಂಡು ಸಂಗೀತ ಕೇಳುತ್ತಿದ್ದರು. ನಾನು ಯೂನಿವರ್ಸಿಟಿಯ ಪಾಠಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ. ನಾನು ಓದುತ್ತಿದ್ದ ಪುಸ್ತಕದಿಂದ ಒಂದು ಪತ್ರ ಹೊರಬಿತ್ತು. ಅದನ್ನು ಅವರಿಗೆ ಓದುತ್ತಾ ಹೇಳಿದೆ:

'ಡಾಕ್ಟರ್ ಸಾಹೇಬ್, ನಿಮ್ಮ ಪತ್ರಗಳು ಎಷ್ಟು ಸುಂದರವಾಗಿವೆಯೆಂದರೆ, ವೈಯಕ್ತಿಕವಾಗಿದ್ದೂ ಅವೈಯಕ್ತಿಕ; ಅವೈಯಕ್ತಿಕವಾಗಿದ್ದೂ ವೈಯಕ್ತಿಕ. ಇವು ಪ್ರಕಟವಾಗಬೇಕು.

ಅವರು ಹಿಂದಿಯಲ್ಲಿ ಹೇಳಿದರು: 'ಹೌದು, ಪ್ರಕಟವಾಗಬೇಕು; ಆದರೆ ನನ್ನ ಸಾವಿನ ನಂತರ. ನಿಮಗೆಲ್ಲ ಹಿಂದಿಯೂ ಗೊತ್ತಿಲ್ಲ, ಇಂಗ್ಲೀಷೂ ಗೊತ್ತಿಲ್ಲ. ಅವನ್ನು ಎಡಿಟ್ ಮಾಡಬೇಡ, ಪ್ಲೀಸ್. ಅವು ಹೇಗಿವೆಯೋ ಹಾಗೇ ಪ್ರಕಟಿಸು– ಫುಲ್ ಸ್ಟಾಪ್ಸ್, ಕಾಮಾ ಮುಂತಾಗಿ...'

ಈ ಗುಚ್ಛದಲ್ಲಿದ್ದ 1967ರ ಪತ್ರಗಳಲ್ಲಿ ಸಾವಿನ ಉಲ್ಲೇಖಗಳಿವೆ:

1967ರ ಜನವರಿ 31ರಂದು ಲೋಹಿಯಾ ರಮಾಗೆ ಬರೆದಿದ್ದರು:

'...ಕಲ್ಕತ್ತಾದಲ್ಲಿ ಆರೋಗ್ಯ ಸ್ವಲ್ಪ ಕೆಟ್ಟಿತು. ಇಲ್ಲಿ ಬಂದು ಮಟ್ಟಿದಾಗ ನಿನ್ನ ಕಾಯಿಲೆಯಂತೆ ನನ್ನ ಕಾಯಿಲೆಯೂ ಬಿಗಡಾಯಿಸಿತು. ಡಿಸೆಂಬರ್ ಹತ್ತೊಂಬತ್ತರ ರಾತ್ರಿ ಮನುಷ್ಯನೊಬ್ಬ ಸಾಯುವುದೆಂದರೆ ಹೀಗೆಯೇನೋ ಎಂದು ಮತ್ತೆ ಮತ್ತೆ ಅನ್ನಿಸತೊಡಗಿತು. ಇವೆಲ್ಲ ತಲೆಯಲ್ಲಿ ಹಾದು ಹೋದ ವಿಚಾರಗಳಷ್ಟೇ.'

12 ಮೇ 1967ರ ಪತ್ರದಲ್ಲಿ ರಮಾರ ಸೋದರಿಯ ಗಂಡನ ಸಾವನ್ನು ಕುರಿತು ಲೋಹಿಯಾ ಬರೆಯುವ ಮಾತು: 'ನಿನ್ನ ಸೋದರಿಯ ದುಃಖ ನನ್ನದೂ ಆಗಿದೆ. ಮನುಷ್ಯನ ಬದುಕು ಇಂಥ ದುಃಖದೊಂದಿಗೆ ಕೊನೆಯಾಗುತ್ತದೆ; ಅಲ್ಲಿಗೆ ಎಲ್ಲವೂ ಮುಗಿಯುತ್ತದೆ. ಇದಕ್ಕೆ ಕೊನೆಯೆಂಬುದಿದೆಯೆ? ಇಡೀ ಪ್ರಕ್ರಿಯೆ ಅಸಹ್ಯಕರ, ಅಹಿತಕರ. ಮನುಷ್ಯ ಬದುಕುತ್ತಾನೆ... ಯಾಕೆ ಬದುಕುತ್ತಾನೆಂದರೆ, ಇತರರ ಆರೋಗ್ಯ, ಕ್ಷೇಮಕ್ಕಾಗಿ ತಾನು ಮಾಡುವುದು ಏನೂ ಇಲ್ಲದಿರುವುದರಿಂದಾಗಿ; ತನಗಾಗಿ ಯಾರು ಬದುಕುತ್ತಾರೋ ಅವರಿಗಾಗಿ ಮನುಷ್ಯ ಬದುಕುತ್ತಾನೆ. ಕಾಲ ಉರುಳಿದಂತೆ ದುಃಖವೇ ರೂಪಾಂತರಗೊಳ್ಳುತ್ತದೆ; ಮತ್ತೊಂದು ಜೀವ ಮೈದಾಳುತ್ತದೆ.'

ಈ ನಡುವೆ ಒಂದು ದಿನ ಲೋಹಿಯಾ ಭೂಪಾಲ್‌ನಲ್ಲಿ ನಡೆಯಲಿದ್ದ ಸಭೆಯಲ್ಲಿ ಸಂಯುಕ್ತ ವಿಧಾಯಕ ದಳಗಳ ಸರ್ಕಾರಗಳಿಗಾಗಿ ಯೋಜನೆಗಳ ಕರಡು ಸಿದ್ಧಪಡಿಸುತ್ತಿದ್ದರು. ಅವತ್ತು ಅವರಿಗೆ ಗಂಗಾನದಿಯಲ್ಲಿ ಸುತ್ತಾಡುವ ಮನಸ್ಸಾಯಿತು. ಇಡೀ ರಾತ್ರಿ ದೋಣಿಯಲ್ಲೇ ಕಳೆದರು. ದೋಣಿ ಸಾಗುತ್ತಿರುವಂತೆ ಮಣಿಕರ್ಣಿಕಾದಲ್ಲಿ ಚಿತೆಗಳು ಉರಿಯುತ್ತಿದ್ದುದನ್ನು ನೋಡಿ ಚಣ ದೋಣಿ ನಿಲ್ಲಿಸುವಂತೆ ಹೇಳಿದ ಲೋಹಿಯಾ, ಯೋಚಿಸುತ್ತಾ ಹೇಳಿದರು: 'ಒಂದು ದೇಹಕ್ಕಾಗಿ ಇಷ್ಟೆಲ್ಲ ಪ್ರದರ್ಶನವೇ?'

ನಾತ್ರಾಪ್ ಫ್ರೈ ಎಂಬ ಕೆನಡಿಯನ್ ವಿಮರ್ಶಕ ಶೇಕ್ಸ್‌ಪಿಯರ್‌ನ ಪ್ರಖ್ಯಾತ ದುರಂತ ನಾಟಕ 'ಹ್ಯಾಮ್ಲೆಟ್'ನ ಕೊನೆಯ ಭಾಗಗಳನ್ನು ಪುರಾಣಪ್ರತೀಕ ವಿಮರ್ಶೆಗೆ ಒಳಪಡಿಸುತ್ತಾನೆ: ಹ್ಯಾಮ್ಲೆಟ್ ಸಾಯುವ ಮುನ್ನ, 'ಗ್ರೇವ್ ಡಿಗ್ಗರ್ ಸೀನ್', ಗೋರಿ ಅಗೆವವರ ದೃಶ್ಯ, ಬರುತ್ತದೆ. ನಾತ್ರಾಪ್ ಫ್ರೈ ಈ ದೃಶ್ಯದ ಮಹತ್ವವನ್ನು ಚರ್ಚಿಸುತ್ತಾ, ಸಾಮಾನ್ಯವಾಗಿ ದುರಂತ ನಾಯಕರಿಗೆ ಸಾವಿಗೆ ಮುನ್ನವೇ ಸಾವಿನ ದರ್ಶನವಾಗುವ ಆದಿಮ ಮಾದರಿಯನ್ನು ತೋರಿಸುತ್ತಾನೆ.

ಒಂದು ದೃಷ್ಟಿಯಿಂದ ನೋಡಿದರೆ, ಭಾರತೀಯ ರಾಜಕಾರಣದ ದುರಂತ ನಾಯಕನಂತೆಯೂ ಕಾಣತೊಡಗುವ ಲೋಹಿಯಾರಿಗೂ ಕೊನೆಯ ಘಟ್ಟದಲ್ಲಿ ಸಾವಿನ ದರ್ಶನವಾದಂತಿದೆ. ಅದು ಅವರ ಮಾತು, ಬರಹಗಳಲ್ಲೂ ಕಾಣುತ್ತದೆ.

* * *

1967ರ ಸೆಪ್ಟೆಂಬರ್ ತಿಂಗಳ ನಡುಭಾಗ. ಆಗ 'ಪ್ರಜಾವಾಣಿ'ಯಲ್ಲಿ ಪತ್ರಕರ್ತರಾಗಿದ್ದ ಖಾದ್ರಿ ಶಾಮಣ್ಣ ದೆಹಲಿಯಲ್ಲಿ ಲೋಹಿಯಾ ಜೊತೆ ಇಡೀ ದಿವಸ ಕಳೆದರು. ಆಗ 'ಲೋಹಿಯಾ ಪದೇ ಪದೇ ಗೋಪಾಲಗೌಡರನ್ನು ನೆನಪು ಮಾಡಿಕೊಳ್ಳುತ್ತಿದ್ದರು' ಎಂಬುದನ್ನು ನೆನೆಯುತ್ತಾ ಖಾದ್ರಿ ಶಾಮಣ್ಣ ಬರೆಯುತ್ತಾರೆ: 'ಕೊನೆಗೆ ಅವರನ್ನು ಬೀಳ್ಕೊಡುವಾಗ ನನಗೆ ಅವರು ಕೊಟ್ಟ ಆದೇಶ; 'ಗೋಪಾಲ್ ಕೋ ಠೀಕ್ ಕರೋ!' (ಗೋಪಾಲ್‌ನನ್ನು ಸರಿ ಮಾಡು). ಈ ಮಾತು ಗೋಪಾಲಗೌಡರ ದೈಹಿಕ, ಮಾನಸಿಕ ಸ್ಥಿತಿಗತಿಗಳೆರಡಕ್ಕೂ ಅನ್ವಯಿಸುವಂಥದಾಗಿತ್ತು. ಅನವಶ್ಯಕ ಉದ್ವೇಗದಿಂದ ಗೋಪಾಲಗೌಡರನ್ನು ರಕ್ಷಿಸಬೇಕೆಂಬ ಕಾತರ ಲೋಹಿಯಾ ಮಾತಿನಲ್ಲಿ ಪಡಿಮೂಡಿತ್ತು.'

ಆ ಘಟ್ಟದಲ್ಲಿ ಲೋಹಿಯಾರ ನಾಯಕವ್ಯಕ್ತಿತ್ವ ದೇಶದಲ್ಲಿ ಬೆಳೆಯುತ್ತಿದ್ದ ರೀತಿಯಲ್ಲೇ ಶಾಂತವೇರಿ ಗೋಪಾಲಗೌಡರ ವ್ಯಕ್ತಿತ್ವ ಕೂಡ ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆಯುತ್ತಿತ್ತು. ಲೋಹಿಯಾ ಪ್ರಧಾನಮಂತ್ರಿಯ ಹುದ್ದೆಗೆ ಅರ್ಹರು ಎಂಬ ಚಿಂತನೆ ಅಲ್ಲಲ್ಲಿ ಮೂಡಿದ್ದನ್ನು ಈ ಹಿಂದೆ ನೋಡಿದ್ದೇವೆ. ಹಾಗೆಯೇ, ಗೋಪಾಲಗೌಡರು 1971ರ ಸುಮಾರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಗಳಿಗೆ ಹತ್ತಿರ ಬಂದು ಸರಿದುಹೋಯಿತು. ಭಾರತದ ಈ ಅಪೂರ್ವ ಸಮಾಜವಾದಿ ಗುರು–ಶಿಷ್ಯರು ವಿರೋಧಪಕ್ಷದ ನೇರ ನಡೆನುಡಿಯ ನಾಯಕರಾಗಿ ಈ ಎತ್ತರ ತಲುಪಿದ್ದರು. ಈ ಅಂಶ ಭಾರತದಲ್ಲಿ ನಿಷ್ಠುರ ನೈತಿಕ ರಾಜಕಾರಣವನ್ನು ಗೌರವಿಸುವ ಧಾರೆ ಸದಾ ಜೀವಂತವಾಗಿರುವುದನ್ನು ಕೂಡ ಸೂಚಿಸುತ್ತದೆ.

ಗೋಪಾಲಗೌಡರ ಆರೋಗ್ಯದ ಬಗ್ಗೆ ಕಾಳಜಿ ತೋರಿದ್ದ ದಿನಗಳಲ್ಲಿ ಲೋಹಿಯಾರ ಆರೋಗ್ಯವೇ ಏರುಪೇರಾಗತೊಡಗಿತು; ಪ್ರಾಸ್ಟೇಟ್ ಗ್ರಂಥಿಯ ಸಮಸ್ಯೆ ಉಲ್ಬಣಗೊಳ್ಳತೊಡಗಿತು. ಸೆಪ್ಟೆಂಬರ್ ತಿಂಗಳ ಕೊನೆಯ ವಾರದಲ್ಲಿ ಆಸ್ಪತ್ರೆ ಸೇರುವ ಒಂದೆರಡು ದಿನ ಮೊದಲು ಪಾರ್ಲಿಮೆಂಟಿನ ಸೆಂಟ್ರಲ್ ಹಾಲ್‌ನಲ್ಲಿ ರಾಜಕೀಯ ವರದಿಗಾರ ಜಗದೀಶಪ್ರಸಾದ್ ಚತುರ್ವೇದಿಯವರ ಜೊತೆ ಲೋಹಿಯಾ ಮಾತಾಡುತ್ತಿದ್ದರು. ಅವತ್ತು ಲೋಹಿಯಾ ಆಡಿದ ಎದೆಯಾಳದ ಮಾತುಗಳನ್ನು ಚತುರ್ವೇದಿ ನೆನೆಯುತ್ತಾರೆ:

ಲೋಹಿಯಾ: ಚತುರ್ವೇದಿ! ಜೀವನ ನನಗೆ ಯಾವ ಆನಂದವನ್ನೂ ಕೊಟ್ಟಿಲ್ಲ.

ಚತುರ್ವೇದಿ: ಹಾಗೆನ್ನಬೇಡಿ. ನೀವು ಲಕ್ಷಾಂತರ ಜನರ ನಾಯಕ. ನೀವು 'ಹೂಂ' ಅಂದರೆ ಜನ ಏನು ಬೇಕಾದರೂ ಮಾಡಲು ತಯಾರಿದ್ದಾರೆ.

ಲೋಹಿಯಾ: ಯಾರೂ ನನ್ನ ಮಾತು ಕೇಳುವುದಿಲ್ಲ.

ಚತುರ್ವೇದಿ: ನೀವು ಮಾತಾಡುತ್ತಿದ್ದರೆ ಜನ ಮೂಕವಿಸ್ಮಿತರಾಗಿ ಕೇಳಿಸಿಕೊಳ್ಳುತ್ತಾರೆ. ನಿಮ್ಮ ಸಭೆಗಳಲ್ಲಿ ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದ ನೆಲೆಸಿರುತ್ತದೆ. ನೀವು ಬರೆದಿದ್ದನ್ನು ಜನ ಆದರದಿಂದ ಓದುತ್ತಾರೆ; ನೀವು ಬರೆದಿರುವುದು ಬೈಬಲ್ ಎನ್ನುವಷ್ಟು ಗೌರವದಿಂದ ಕಾಣುತ್ತಾರೆ.